International Journal of Advance and Applied Research (IJAAR)
Peer Reviewed Bi-Monthly
ISSN – 2347-7075
Impact Factor – 0.899
Vol.6 No.2 Nov–Dec 2018

# ಮಾತೆ ಮಾಣಿಕೇಶ್ವರಿ ಅವರ ಯೋಗಶಕ್ತಿ

**ಬಸವರಾಜ ಎಂ.ಕೊನೇರಿ**

ಕನ್ನಡ ಸಹಾಯಕ ಪ್ರಾಧ್ಯಾಪಕರು,

ಸ.ಪ್ರ.ದ.ಕಾಲೇಜು, ಸೇಡಂ

ಯೋಗ ಮಾನವನ ಆನ್ನೋದ್ಧಾರಕ್ಕೆ ಸಾಧನ ಯೋಗ ಸಾಧನೆಯಿಂದ ಮರಣವನ್ನು ಜಯಿಸಬಹುದು. ಅನಾರೋಗ್ಯ ಆಕಾಲ ಮರಣಗಳಿಂದ ವಾರಾಗಿ ಮೃತ್ಯುಂಜಯನಾಗಬಹುದು. ಯೋಗ ಒಂದು ನಿರ್ದಿಷ್ಟವಾದ ಶಾಸ್ತ್ರ ದೇಹ, ಮನಸ್ಸು ಆತ್ಮಗಳ ನಿರ್ದಿಷ್ಟ ಗುರಿಯೇ ಇದರ ಉದ್ದೇಶ. ಬಾಹ್ಯ ಪ್ರಪಂಚದಿಂದ ವಿಮುಖಿಗೊಳಿಸಿ ಇಂದ್ರಿಯಗಳನ್ನು ಅಂತರ್ಯದಲ್ಲಿ ಏಕಾಗ್ರತೆಗೊಳಿಸುವುದು ಯೋಗದ ಹಾದಿ ಅಂತರ್ಮುಖಿಯಾದರೂ ಈ ಹಾದಿಯು ಹೆಚ್ಚಾಗಲು ಮಾನವನ ಹೃದಯ ಮನಸ್ಸು ಇಂದ್ರಿಯ, ಭೌತಿಕ ಶರೀರವನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ odusert ಯೋಗದಿಂದ ಶಾಂತಿ, ಶಾಶ್ವತ ಸುಖದೊರೆಯುವುದು ಪರಿಪೂರ್ಣತೆಯನ್ನು ಪಡೆಯಬಹುದು "ಯೋಗ ಮಾನವನ ನಿತ್ಯ ಜೀವನ, ವ್ಯಾಪಾರ, ವ್ಯವಹಾರಗಳಲ್ಲಿ ಸಹಾಯವಾಗುವುದಲ್ಲದೆ ನೆಮ್ಮದಿ, ಶಕ್ತಿ ಸಾಮರ್ಥ್ಯ, ದೀರ್ಘಾಯಸ್ಸು, ಉತ್ತಮ ಆರೋಗ್ಯ ನೀಡುವುದು ಯೋಗಾಭ್ಯಾಸವು ಪಾಶವೀ ಸ್ವಭಾವದಿಂದ ದೈವೀಪ್ರಭಾವಕ್ಕೆ ಮಾರ್ಪಡಿಸಿ ಮಾನವನನ್ನು ದೈವ ಮಹಿಮೆಯ ಪರ್ವತದ ಶಿಖರಕ್ಕೇರಿಸುವುದೆಂದು" ಶ್ರೀ ಸ್ವಾಮಿ ಶಿವಾನಂದರು ಹೇಳಿದ್ದಾರೆ.

ಸಾಧನಾ ಮಾರ್ಗ ಬಹು ಕಠಿಣವಾದದ್ದು, ಸಾಧಕನಿಗೆ ಅದು 'ಹೂವಿನ ಹಾರವು ಹೌದು ಹಿರಿದ ಖಡ್ಗವೂ ಹೌದು" ಆದರೆ ಅವನು ತನ್ನ ಏಕೈಕ ನಿಷ್ಠೆಯಿಂದ ಅದರಲ್ಲಿ ಸಿದ್ಧಿಪಡೆದನೆಂದರೆ ಆ 'ಹಿರಿದ ಖಡ್ಗವೇ ಕೊರಳ ಹಾರವಾಗುತ್ತದೆ' ಇದು ಸರ್ವಸಮ್ಮತವಾದ ಸತ್ಯವು ಹೌದು ನಿರ್ವಿಕಲ್ಪ ಸಮಾಧಿ ಅಥವಾ ನಿರಾಕಾರ ಪರಬ್ರಹ್ಮ ಸಾಕ್ಷಾತ್ಕಾರ ಸಾದಾನಾ ಮಾರ್ಗಗಳೆಲ್ಲಾ ಅತ್ಯಂತ್ತ ಕಠಿಣವಾದ ಮಾರ್ಗ. ಮಾಣಿಕೇಶ್ವರಿಯವರು ಆ ಮಾರ್ಗದಲ್ಲಿಯೂ ಬಹುಬೇಗ ಸಿದ್ಧಿಪಡೆದುಕೊಂಡರು.

ಇವತ್ತಿನ ವೈಜ್ಞಾನಿಕ ಯುಗದಲ್ಲಿ ನಮ್ಮೆಲ್ಲರ ಮಧ್ಯ ಮಾನವ ಜನ್ಮತಾಳಿ, ಈಗಲೂ ಜಗತ್ತಿನ ಆಶ್ಚರಗಳಲ್ಲಿ ಒಂದಾಗಿ ಬಾಳಿ ಬೆಳಗುತ್ತಿರುವ ಮಾತೆ ಮಾಣಿಕೇಶ್ವರಿ ಅವರು ಅನ್ನ - ನೀರಿಲ್ಲದೇ ಕೇವಲ ಯೋಗದ ಬಲದಿಂದ ಬಾಳಿ ಬೆಳಗುತ್ತಿರುವ ಜೀವಂತ ದೇವರಾಗಿದ್ದಾರೆ. ಲೌಕಿಕದ ಕ್ಷಣಿಕ ಸುಖಕ್ಕಾಗಿ ಹಂಬಲಿಸದೇ ಶಾಶ್ವತ ಸುಖಕ್ಕಾಗಿ ಎಲ್ಲವನ್ನು ತ್ಯಾಗ ಮಾಡಿದ ವೀರ ವಿರಕ್ತಿ, ಮಹಾಶಕ್ತಿದಾಯಿನಿಯಾಗಿದ್ದಾರೆ. ಸೃಷ್ಟಿಯ ಅದ್ಭುತ ವೈಚಿತ್ರಗಳಲ್ಲಿ ಮಾತೆ ಮಾಣಿಕಮ್ಮನವರ ಜೀವನವೂ ಒಂದಾಗಿದೆ. ಅನೇಕ

ವರ್ಷಗಳಿಂದ ಆಹಾರ ಸಂಪರ್ಕವಿಲ್ಲದೇ ಪ್ರಮಲ್ಲಿತರಾಗಿದ್ದಾರೆ. ಅನೇಕ ತಿಂಗಳಾವಧಿ ಬಾಗಿಲನ್ನು ಮುಚ್ಚಿಕೊಂಡು ಗುಹೆಯಲ್ಲಿ ವಾಸವಾಗುವ ಇವರ ಬದುಕು ಹೇಳಬಹುದು. ಈ ಪ್ರಪಂಚಕ್ಕೆ ನೀಡಿದ ನೂತನ ಪವಾಡವೆಂದು

ಇದು ಮನುವ ಬುದ್ಧಿಗೆ ನಿಲುಕದ ಮಾತು. ವಿಜ್ಞಾನಿಗಳಿಗೆ ಹೊಳೆಯದ ಸಂಗತಿ ಸಂಶೋಧಕರಿಗೆ ಇದೊಂದು ರಹಸ್ಯ ಸಹಸ್ರಾರು ಜನ ಹಗಲಿರುಳು ಕಾವಲಿದ್ದು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಿದ್ದಾರೆ.

೨೧ ನೇ ಶತಮಾನದಲ್ಲಿ ನಿರಾಹಾರದಿಂದ ಬದುಕುವುದನ್ನು ನಂಬದ ಆಧುನಿಕ ಜಗತ್ತು ಅನುಮಾನಸ್ಪದ ರೀತಿಯಿಂದ ನೋಡುವುದುಂಟು. ಆದರೆ ಸಾಧನೆಗೆ ಯಾವುದೂ ಅಡ್ಡಿಯಾಗಲಾರದು ಎಂಬುದನ್ನು ಸಾಧನಾ ಪ್ರಿಯರಷ್ಟೇಬಲ್ಲರೂ ಎಂಬ ಮಾತಿನಂತ ಮಾತೆ ಮಾಣಿಕೇಶ್ವರಿಯವರ ಅದ್ಭುತ ಆಧ್ಯಾತ್ಮಿಕ ಸಾಧನೆಯಿಂದಾಗಿಯೇ ಅಹಿಂಸೆಯ ಪ್ರಚಾರ ಹೆಚ್ಚಾಗಿದ್ದು, ಯಾನಗುಂದಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ನಡೆಯುತ್ತಿದ್ದ ಪ್ರಾಣಿಬಲಿ ಕ್ರಮೇಣ ಕಡಿಮೆಯಾಗುತ್ತ ಬಂದಿದೆ. ಹೀಗಾಗಿ ಇವರು ಪರಿಸರ ಪೂಜ್ಯರು, ಲೋಕಪೂಜ್ಯರಾಗಿ ಕಂಗೊಳಿಸುತ್ತಾರೆ. ಧನ, ಕನಕ, ಅಧಿಕಾರ ವಿದ್ಯೆ ಮೊದಲಾದ ಲೌಕಿಕ ಸಂಪತ್ತಿನಿಂದ ಮಾನವನು ಎಂದೂ ಅಮರನಾಗುವುದಿಲ್ಲ. ಅದಕ್ಕಾಗಿ ಪರಾವಿದ್ಯೆಯೆ ಮದ್ದು ಇದನ್ನರಿತುಕೊಂಡು ಮಾಣಿಕಮ್ಮನವರು ಯಾವ ಶಾಸ್ತ್ರಗ್ರಂಥಗಳು ಓದುವ ಹವ್ಯಾಸಕ್ಕೆ ಬಲಿಬಿಳಲಿಲ್ಲ. ತಮ್ಮ ಲೋಕಾನುಭವದಿಂದ ಅದೆಲ್ಲವನ್ನು ಅರಿತುಕೊಂಡರು. ಓದು ಬಾರದಿದ್ದರೂ ಧ್ಯಾನಯೋಗದ ಬಲದಿಂದ ಆತ್ಮಜ್ಞಾನ ಪಡೆದುಕೊಂಡರು. ಅದುವೆ ದೈವೀಶಕ್ತಿಯಾಗಿ ಪರಿಣಮಿಸಿ ಅವರು ಮಹಾಯೋಗಿಣಿಯಾದದ್ದು. ಕೇವಲ ಗಾಳಿಯನ್ನೇ ಆಹಾರವನ್ನಾಗಿ ಸೇವಿಸಿ ಜೀವಿಸಿದ ಈ ಸಂತರ ಜೀವನ ಚರಿತ್ರೆ "ಜಗತ್ತಿನ ಎಂಟನೇ ಆಶ್ಚರವೇ ಸರಿ, ಎಂದು ಯೋಗಾನಂದ ಪರಮಹಂಸರು ಬರೆದಿದ್ದಾರೆ (ಹೇಳಿದ್ದಾರೆ)"

ಗುರುಮಿಠಕಲ್ ಶಾಂತವೀರ ಸ್ವಾಮಿಗಳು ಮತ್ತು ಮಂಗಲಮಪಲ್ಲಿಯವರು, ತಮ್ಮ ಪುಸ್ತಕಗಳಲ್ಲಿ ಶಿವಯೋಗಿಣಿ ಮಾಣಿಕೇಶ್ವರಿಯವರ ಬಗ್ಗೆ ಬರೆಯುತ್ತ [ನಿರಾಹಾರ ಮಹತ್ವ "ಸ್ನಾನ ಮಾಡಿದರೆ ನೀರು ಕುಡಿದಂತೆಯೂ, ಅಡುಗೆ ಮಾಡಿದರೆ ಊಟ ಮಾಡಿದಂತೆಯೂ ಆಗುತ್ತದೆ" ಎಂಬ ಅನುಭವದ ಮಾತನ್ನು ಉಲ್ಲೇಖಿಸಿದ್ದಾರೆ.

ಗುರುವಿನ ಅನುಗ್ರಹ ಮಾತ್ರದಿಂದಲೇ ಯೋಗ ಸಾಧನೆಯಲ್ಲಿ ಪೂರ್ಣ ಸಾಫಲ್ಯ ದೊರೆಯುವುದೆಂದು ಶ್ರೀ ರಾಮಕೃಷ್ಣರು ಭಾವಿಸಿರಲಿಲ್ಲವಂತೆ,ಅನುಗ್ರಹ ನಿಜ್ವಕ್ಕೂ ಭವ್ಯ ಬೆಳಕು. ದಿವ್ಯ ಪ್ರಕಾಶ, ಆ ಬೆಳಕನ್ನೇ ನೋಡುತ್ತಾ ಕೇವಲ ಕುಳಿತರೆ ಸಾಧನೆ ಪೂರ್ಣವಾಗದು. ಬೆಳಕಿನ ಆಸರೆಯಲ್ಲಿ ದಿವ್ಯಪಥದಲ್ಲಿ ಸತತವೂ ಮನಸ್ಸನ್ನು ಸಾಗಿಸುತ್ತಿರಬೇಕು ಮನೋಮಾರ್ಗವು ಬೆಳಕಿನ ಮಾರ್ಗದಲ್ಲಿಯೇ ನಿರಂತರವೂ ನಡೆಯುತ್ತಿದ್ದರೆ ಕ್ರಮೇಣ ಯೋಗ ಸಾಧನೆಯು ಸಿದ್ಧಿ ಪಡೆಯುವುದು ಶ್ರೀ ರಾಮಕೃಷ್ಣರು ಹೀಗೆ ತಮ್ಮ ಶಿಷ್ಯರನ್ನು ಅನುಗ್ರಹದಬೆಳಕಿನಲ್ಲಿ ಸ್ವಪ್ರಯತ್ನ, ಸ್ವಸಾಮರ್ಥ್ಯದಿಂದ ಮುಂದೆ - ಮುಂದೆ ಸಾಗಲು ಬಿಡುತ್ತಿದ್ದು, ತಾವು ಹಿನ್ನೆಲೆಯಲ್ಲಿ ಕೇವಲ ಮಾರ್ಗದರ್ಶಕರಾಗಿ ನಿಂತಿರುತ್ತಿದ್ದರಂತೆ. ಹೀಗಾಗಿ ತಪಸ್ಸಾಚರಿಸಲು ಹಿಮಾಲಯಕ್ಕೆ ಹೋಗಬೇಕಾಗಿಲ್ಲ ಜನಸಾಮನ್ಯರ ಮಧ್ಯದಲ್ಲಿಯೇ ಇದ್ದು ಆಚರಿಸಬಹುದು ಎಂಬುದನ್ನು ತೋರಿಸಿಕೊಟ್ಟ ಮಾತನಾಮರ ನಮ್ಮೊಡನಿದ್ದಾರೆ.

**ಯೋಗ'ದ ಅರ್ಥ ಮತ್ತು ಪ್ರಾಚೀನತೆ:**

ಸರ್ವ ಪಾಪಹರೋಯೋಗೋ ವಿರಕ್ತ ಪ್ರೈವ ಕಥ್ಯತೇ ವೈರಾಗ್ಯಾತ್ ಜಾಯತೇ

ಜ್ಞಾನಂ ಜ್ಞಾನಾತ್ ಯೋಗ: ಪ್ರವರ್ತತೇ" 'ಯೋಗ' ಎಂದರೆ 'ಕೂಡಿಕೆ' ಒಂದುಗೂಡಿಸು, ನಿಗ್ರಹಿಸು, ಕೇಂದ್ರಿಕರಿಸು, ಹೊಂದಿಕೊಂಡಿರುವುದು ಎಂದು ಅರ್ಥ.

ಯೋಗಿ ತನ್ನ ಉಸಿರಾಟದ ಮೇಲೆ ಸಂಪೂರ್ಣ ಹತೋಟಿಯನ್ನು ಸಾಧಿಸಿ ದೀರ್ಘವಾದ, ಲಯಬದ್ಧವಾದ ಉಸಿರಾಟವನ್ನು ಮಾಡಿರಬೇಕು. ಅದು ಅವನ ನರಮಂಡಲವನ್ನು ಶಾಂತಗೊಳಿಸುವುದು. ಹೀಗೆ ಜಾಗ್ರತಾವಸ್ಥೆಯಿಂದ ಸಮಾಧಿಯನ್ನು ಹೊಂದಿ ತುರಿಯಾವಸ್ಥೆಗೆ ಮುಟ್ಟಿದಾಗ ಅವನ ಪ್ರಾಣವಾಯು ಸೇವನೆ ಅತಿ ಕಡಿಮೆಯಾಗಿ ಶರೀರದಲ್ಲಿ ಅಂಗರಾಮ ವಾಯು ಅಧಿಕವಾಗಿ ಮೆದುಳಿನ ಕ್ರಿಯೆ ಕುಂಠಿತವಾಗುವುದು. ಪರಿಣಾಮವಾಗಿ ಪಂಚ ಜ್ಞಾನೇಂದ್ರಿಯಗಳು ಪಂಚ ಕರ್ಮೇಂದ್ರಿಯಗಳು ನಿಷ್ಕ್ರಿಯವಾಗುವವು. ಇದಕ್ಕೆ ಸಮಾಧಿ, ಪರಮಾನಂದ ಬ್ರಹ್ಮ ಸಾಕ್ಷಾತ್ಕಾರವೆಂದು ಹೇಳುವುದು" ಮಾನವನು ಅರಿಷಡ್ವರ್ಗಗಳಲ್ಲಿ ಅಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಪಾಶಗಳಿಂದ ಲೌಕಿಕ ಕ್ಷಣಿಕ ಸುಖದ ಕಾರಣ ಬಿಗಿಯಲ್ಪಟ್ಟಿರುತ್ತಾನೆ.

ಇದರಿಂದ ಪಾರಾಗಲು ಇರುವ ಒಂದೇ ಒಂದು ದಾರಿ ಎಂದರೆ ಆತ್ಮಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಾ, ತನ್ಮೂಲಕ ಇಂದ್ರಿಯ ನಿಗ್ರಹ ಶಕ್ತಿಯನ್ನು ಪಡೆದು, ಲೌಕಿಕ ಸುಖದ ಕಡೆ ಗಮನವನ್ನು ಕಡಿಮೆ ಮಾಡಿಕೊಳ್ಳುತ್ತಾ. ಅಲೌಕಿಕ ಸುಖ ಅಂದರೆ ಅಂತರಾತ್ಮನ ಸನ್ನಿಧಿಯ ಸುಖವನ್ನು ಲಭ್ಯಗೊಳಿಸಿಕೊಳ್ಳುವುದನ್ನೇ ಹಿರಿಯರು ಮುಕ್ತಿ ಎನ್ನುವರು.  ಈ ಮುಕ್ತಿ ಎಂಬ ಅಮೃತಪಾನದ ಮೂಲಕ ಅಮರತ್ವವನ್ನು ಪಡೆಯಲು ಇರುವ ಸಾಧನೆಯೇ 'ಯೋಗ' ತನ್ಮಯತೆಯಲ್ಲಿ ದೀರ್ಘಕಾಲ ಧ್ಯಾನದಲ್ಲಿ ಮುಳುಗಿ ಚಿನ್ಮಯನನ್ನು ಕಾಣುವ ಈ ಯೋಗ ವಿಧಾನವು ಮನಸ್ಸನ್ನು ಪ್ರಾಪಂಚಿಕ ಕ್ಷುಲ್ಲಕ ಸುಖಗಳು ಬಿಡದೆ. ಹೃದಯ ಮಂದಿರದಲ್ಲಿ ನೆಲೆಸಿರುವ ಆರಾಧ್ಯ ದೇವನ ಕಡೆಯೆ ಸ್ಥಿರಗೊಳಿಸುವುದರ ಮೂಲಕ ಅತಿ ಸುಲಭ ಎನಿಸುವುದು.

**ಪತಂಜಲ ಸೂತ್ರದ ಪ್ರಯೋಗಿ: ಮಾತಾ ಮಾಣಿಕೇಶ್ವರಿ:**

'ಕರ್ಮಜಂ ಬುದ್ಧಿ ಯುಕ್ತಾಹಿ ಫಲಂತ್ಯಕ್ತ್ವಾ ಮನೀಷಣ

| ಜನ್ಮಬಂಧವಿನಿರ್ಮುಕ್ತಾ: ಪದಂಗಚ್ಚಂತ್ಯನಾಮಯಮ್ (ಭ.ಗೀ.೨-೫೧)

ಜ್ಞಾನಿಗಳು ಕರ್ಮದ ಫಲವನ್ನು ಬಯಸದೇ ಜ್ಞಾನ ಮಾರ್ಗದಲ್ಲಿ ನಿರತರಾಗಿ ಬಾಳಬಂಧನವನ್ನು ಕಳಚಿಕೊಂಡು ಧೋಷ ದೂರವಾದ ವರಮ ಪದವಿಯನ್ನು ಪಡೆಯುತ್ತಾರೆ ಸಂಪತ್ತುಗಳಾದ ಹೆಣ್ಣು, ಮಣ್ಣು, ಹೊನ್ನು ಇವುಗಳನ್ನು ಬಯಸಿ ಮೋಕ್ಷವನ್ನು ಸಂಪಾದಿಸಲಾಗದು. ಗಂಡು-ಹೆಣ್ಣು, ಹೊಲ-ಮನೆ, ಆಸ್ತಿ-ಅಂತಸ್ತುಗಳನ್ನು ನಂಬಿದಷ್ಟು ಅವುಗಳ ದಾಹವು ಹೆಚ್ಚುತ್ತ ಕಡೆಗೆ ಅವುಗಳ ಪ್ರಲೋಭನಕ್ಕೆ ಇಳಿಯುತ್ತಾನೆ. ಮಾನವ. ಇದರಿಂದ ಅನಂತೋಷ, ಅಸಮಾಧಾನ, ಅಶಾಂತಿ ಮೊದಲಾದ ವಿಕಾರಗಳುದ್ಭವಿಸಿ ಕಡೆಗೆ ಅಭಿಮಾನದ ಅಹಂಕಾರದಲ್ಲಿ ಪತನವಾಗುತ್ತವೆ. ಆತ್ಮಜ್ಞಾನವನ್ನು ಪಡೆಯಲು ಬಯಸುವ ಯೋಗಿಗಳು, ಯೋಗ ರಹಸ್ಯವನ್ನು

ಬಲ್ಲವರಾಗಿ, ಯೋಗ ಸಿದ್ಧಿಯಿಂದ ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಕಾಮ್ಯ ಈಶತ್ವ ಮತ್ತು ವಾಸತ್ವಗಳೆಂಬ ಅಷ್ಟಸಿದ್ಧಿಯನ್ನು ಪಡೆದವರಾಗಿ, ಲೋಕಕಲ್ಯಾಣ ಕಾರ್ಯಗಳಿಗಾಗಿ ಅವುಗಳನ್ನು ಬಳಸಿಕೊಳ್ಳುತ್ತಾರೆ.

ಜಗತ್ತಿನ ಆಶ್ಚರ್ಯಕರಗಳಲ್ಲಿ ಮಾಣಿಕೇಶ್ವರಿಯಂತೆ ನಿರಾಹಾರದಿಂದ ಬದುಕಿದ ಹಲವು ಮಹಿಳೆಯರನ್ನು ಹೆಸರಿಸಲಾಗಿದೆ. ಮಹಾಯೋಗಿ ಪರಮಹಂಸಯೋಗಾನಂದರು ಪರೀಕ್ಷಿಸಿದ ಮಹಿಳೆಯರಲ್ಲಿ, ಕ್ರೈಸ್ತಧರ್ಮದ 'ನ್ಯೂಮನ್ನಾ' ಬೇವೂರಿನ ಗಿರಿಬಾಲೆ, ಕಾಡಮಗೇರಿಯ ತಾರಕಮ್ಮರಲ್ಲಿ ಮಾಣಿಕೇಶ್ವರಿಯವರು ಒಬ್ಬರು. ಸ್ವಾಮಿ ಪರಮಹಂಸ ಯೋಗಾನಂದರು ಯಾನಾಗುಂದಿಗೆ ಬಂದು ಮಾಣಿಕೇಶ್ವರಿಯ ನಿರಾಹಾರದ ಉದ್ದೇಶವನ್ನು ವಿಚಾರಿಸಲು ಮಾಣಿಕಮ್ಮನವರು 'ಸ್ನಾನಮಾಡಿದರೆ ನೀರು ಕುಡಿದಂತಾಗುತ್ತದೆ. ಅಡುಗೆ ಮಾಡಿದರೆ ಊಟ ಮಾಡದಂತೆನಿಸುತ್ತೆ" ಮಾನವನೊಂದು ಶಕ್ತಿ ಸ್ವರೂಪನು ಆತ್ಮಜ್ಞಾನದಿಂದ ಬದುಕಬಲ್ಲನು ಆಹಾರದಿಂದಲ್ಲವೆಂದು ಲೋಕಕ್ಕೆ ನಿರೂಪಿಸಲೆಂದು ಎಂದು ಹೇಳಿದರು.

ಮಾಣಿಕಮ್ಮನವರು ಅನ್ನ-ನೀರು ಸೇವಿಸದೆ ಇರುವುದಕ್ಕೆ ಯಾವುದೇ ಪವಾಡವಿಲ್ಲ. ಈ ಸಾಧನೆ ಅವರಿಗೆ ಒಲಿದಿದ್ದು ಅವರು ಪತಂಜಲಿ ಯೋಗದ ಸೂತ್ರದಿಂದ ಅದರ ೧೦೧/೩೧ ರಲ್ಲಿ ತಿಳಿಸಿರುವಂತೆ ಅದೊಂದು ಯೋಗಿಕ ಶಕ್ತಿಯ ನಿರ್ಮಾಣ ಸ್ಥಿತಿ. ಮೇರು ದಂಡದಲ್ಲಿ ನೆಲೆಗೊಂಡ ಸೂಕ್ಷ್ಮಶಕ್ತಿಗಳ ೫ ನೇ ಕೇಂದ್ರವಾದ ವಿಶುದ್ಧ ಚಕ್ರದ ಮೇಲೆ ಪರಿಣಮಿಸುವ ಒಂದು ಬಗೆಯ ಪ್ರಾಣಾಯಾಮವನ್ನು ಅವರು ಮಾಡುತ್ತಾರೆ.

ಗಂಟಲಿಗೆ ದುರಾಗಿರುವ ವಿಶುದ್ಧ ಚಕ್ರವು ಭೌತಕೋಶಗಳ ಪರವಾನುಗಳೊಳಗೆ ಸರ್ವ ವ್ಯಾಪಿಯಾಗಿರುವ ಪಂಚಭೂತಗಳಲ್ಲಿ ಐದನೆಯ ಆಕಾಶ ತತ್ವವನ್ನು ನಿಯಂತ್ರಿಸುತ್ತದೆ. ಚಿತ್ರದಲ್ಲಿ ಮನಸ್ಸನ್ನು ಕೇಂದ್ರಿಕರಿಸಿದರೆ ಶುದ್ಧಾಕಾಶದ ಶಕ್ತಿಯಿಂದಲೇ ಬದುಕುವುದು ಸಾಧಕನಿಗೆ ಸಾಧ್ಯವಾಗುತ್ತದೆ ಎಂದು ಪತಂಜಲಿ ಯೋಗ ಸೂತ್ರದಲ್ಲಿ ಉಲ್ಲೇಖಿಸಲಾಗಿದೆ ಇದನ್ನೇ ಮಾತೆ ಮಾಣಿಕೇಶ್ವರಿಯವರು ಪ್ರಯೋಗಿಸುತ್ತಾರೆಂದು ತಿಳಿದುಬರುತ್ತದೆ.

ದೇಹದ ವಿದ್ಯುತ್ ಪ್ರವಹಿಸುವಂತೆ ಮಾಡುವ ಅತೀ ಮುಖ್ಯವಾದ ವಿಕಿರಣ ಶಕ್ತಿ ಆಹಾರ ರೂಪದಲ್ಲಿ ಸೂರ್ಯಕಿರಣದಿಂದ ನಮಗೆ ದೊರಕುತ್ತದೆ ಎಂಬುದನ್ನು ಸ್ವತಃ ಮಾತಾ ಮಾಣಿಕೇಶ್ವರಿ ಅಮ್ಮನವರು ತೋರಿಸಿಕೊಟ್ಟಿದ್ದಾರೆ. ಅವರಿಗೆ ಹೊರಗಿನ ಆಹಾರ ಅಗತ್ಯವಿಲ್ಲ ಸೂರ್ಯನ ಪ್ರಭೆಯಿಂದ ಬಿಡುಗಡೆಯಾಗುವ ಶಕ್ತಿಯನ್ನು ನೇರವಾಗಿ ಸ್ವೀಕರಿಸಿಕೊಂಡು ಬದುಕುತ್ತಿದ್ದಾರೆಂದು ಅರ್ಥ ಅವರಿಗೆ ಹಸಿವೆಯೆಂಬುದು ಇಲ್ಲವಾಗಿ ಅಂತಃಶಕ್ತಿಯಿಂದ ತೇಜೋಮಯವಾಗಿ ಪ್ರಜ್ವಲಿಸುತ್ತಾ ಸಕಲ ಸದ್ಭಕ್ತರಿಗೆ ಸನ್ಮಾರ್ಗ ತೋರುತ್ತಿದ್ದಾರೆ.

**ವೈಜ್ಞಾನಿಕ ಸತ್ವಪರೀಕ್ಷೆ:**

ಮಾಣಿಕೇಶ್ವರಿಯ ಜೀವನವು ಒಂದು ಒಡೆಯಲಾಗದ ಸಮಸ್ಯೆಯಾಗಿ ಪರಿಣಮಿಸಿತು. ಅನ್ನ-ನೀರುಗಳಿಲ್ಲ; ಮಲ ಮೂತ್ರಗಳಿಲ್ಲ, ಬದುಕುವುದು ಹೇಗೆ ಸಾಧ್ಯ? ಎಂದು ನಿರಾಹಾರವನ್ನು ಕಟುವಾಗಿ, ವೈಜ್ಞಾನಿಕವಾಗಿ, ಗೋಪ್ಯಮಯವಾಗಿ ಪರೀಕ್ಷಿಸಿದರು. ಅಮೇರಿಕಾ ದೇಶದಿಂದ ಆಹಾರ ಪದಾರ್ಥಗಳನ್ನು ಭಾರತಕ್ಕೆ ಪೂರೈಸುವ ಕೇರ್ (Care) ಸಂಸ್ಥೆಯು ಪ್ರಸಿದ್ಧಿ ಪಡೆದಿದೆ. ಈ ಸಂಸ್ಥೆಯ

ತಂಡವೊಂದು ಹೈದ್ರಾಬಾದಿಗೆ ಬಂದಿತು ಮಾಣಿಕೇಶ್ವರಿಯ 'ನಿರಾಹಾರವು' ಹೇಗೆ ಸಾಧ್ಯವಿದೆ ಎಂದು ತರ್ಕಿಸಿ ಯಾನಾಗುಂದಿಗೆ ಪ್ರಯಾಣ ಬೆಳೆಸಿದರು. ಯಾದಗಿರಿಯ "ಕ್ರೈಸ್ತರ ಆಸ್ಪತ್ರೆಯಾದ 'ಹಾಲ್ವಟನ್' ಹಾಸ್ಪಿಟಲ್ ನಲ್ಲಿದ್ದ ಡಾಕ್ಟರ್ 'ಲೇವಿ' ಎಂಬುವರನ್ನು ಜೊತೆಗೆ ಕರೆದುಕೊಂಡು ಬಂದಿದ್ದರು. ಅವರು ಮಾಣಿಕಮ್ಮನವರು 'ಉಗಳು' ಮೈಯನ್ನೊರಸಿಕೊಳ್ಳುವ ಕರವಸ್ತ್ರರ ಪ್ರತಿನಿತ್ಯ ಉಪಯೋಗಿಸುವ ಸ್ನಾನದ ನೀರು (ಮೋರಿಯ ನೀರು) ಗಳನ್ನು ಅಮೇರಿಕಾ ದೇಶಕ್ಕೆ ಒಯ್ದರು. ಶಾಸ್ತ್ರೀಯ ವಿಶ್ಲೇಷಣೆ (Scientific Analysis) ನಡೆಸಿದರು ವರದಿಯೊಡನೆ ಪ್ರಶಂಸಾ ಪತ್ರದಲ್ಲಿ ಇಂತಹ ಮಹಿಳೆಯನ್ನು ಪಡೆದ ಭಾರತ ಪುಣ್ಯಭೂಮಿ ಎಂದು. ಮಾಣಿಕೇಶ್ವರಿಯವರು ನಿರಾಹಾರಿ ಎಂಬುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಉಲ್ಲೇಖಿಸಿದ್ದಾರೆ"

ಇನ್ನೊರ್ವ ಡಾ.ಅಕ್ಬರ ಅಲಿ ಅವರು ಹೈದ್ರಾಬಾದಿನವರು ಯುನಾನಿ ಮತ್ತು ಆಯುರ್ವೇದ ವೈದ್ಯವಂಡಿತರು. ಯಾನಾಗುಂದಿ ರಾಮರೆಡ್ಡಿ ಗೌಡರೂ ಡಾ.ಅಕ್ಷರ ಅಲಿ ಅವರ ವೇಣುಟು ಆದುದರಿಂದ ಮಾತೆ ಮಾಣಿಕೇಶ್ವರಿ ವಿಷಯ ತಿಳಿದುಕೊಂಡಿದ್ದರು. ಚಿಕಿತ್ಸಕ ಬುದ್ಧಿಯ ಡಾ.ಅಕ್ಷರ ಅಲಿ ಸಾಹೇಬರು ಪರೀಕ್ಷಿಸಿ ನೋಡಬೇಕೆಂದು ಯಾನಾಗುಂದಿಗೆ ಬಂದಿದ್ದರು. ಗೌಪ್ಯವಾಗಿ ಪರೀಕ್ಷಿಸಿದ ಇಡೀ ರಾತ್ರಿ ಕಾದು ಕುಳಿತ, ಬೆಳಗಿದ ನಂತರ ಸ್ನಾನ ಮುಗಿಸಿ ಈಗ ಬರುತ್ತೇನೆಂದು ಗುಡಿಯ ಹೊರಗೆ ಹೋದ ಮಾಣಿಕೇಶ್ವರಿಯನ್ನು ಗುಡಿಯ ಬಾಗಿಲಲ್ಲಿ ನಿಂತು ನಿರೀಕ್ಷಿಸಿದ ಗುಡಿಯೊಳಗಿಂದಲೇ ಪೂಜೆ ಮುಗಿಸಿ ಬರುತ್ತಿರುವ ಮಾಣಿಕೇಶ್ವರಿಯನ್ನು ಕಂಡು ಪರಮಾಶ್ಚರ್ಯದಿಂದ "ನನ್ನೆದುರಿನಿಂದಲೇ ಹೊರಗೆ ಹೋದ ಇವಳು ಏಕೈಕ ಬಾಗಿಲಿನಲ್ಲಿ ನಾನು ಕಾಯ್ದಿರಲು ಗುಡಿಯೊಳಗಿಂದ ಬರುತ್ತಿರುವುದು ಪರಮಾದ್ಭುತವಾದುದು. ಒಂದು ತುತ್ತು ಅನ್ನವಿಲ್ಲ, ಒಂದು ಹನಿ ನೀರಿಲ್ಲ ಇದೊಂದು ಜಾಗತಿಕ ಆಶ್ಚರ್ಯಕರ ಘಟನೆ ಎಂದು ಕೊಂಡಾಡಿದರು", ಅಸಾಮಾನ್ಯ ಸ್ತ್ರೀ ಎಂದು ಪರೀಕ್ಷಿಸಿ, ಮಹಾನ್ ಶಿವಯೋಗಿನಿ ಎಂದು ಹಾಡಿ ಹೊಗಳಿದರು. ಮಹಾತ್ಮಾ ಗಾಂಧಿಯವರ ತತ್ವಗಳನ್ನು ಅನುಸರಿಸಿರುವ ಅಕ್ಷರಲಿಯವರು ದೈವನಿಷ್ಠರು ಸತ್ಯವನ್ನು ಒರೆಗೆ ಹಚ್ಚಿ ನಂಬುವವರಲ್ಲ. ಮಾಣಿಕಮ್ಮನವರು ಸಾಮಾನ್ಯ ಸ್ತ್ರೀಯಲ್ಲವೆಂದು ನಂಬಿದರಲ್ಲದೆ ಹೈದ್ರಾಬಾದಿನ ಇಂಗ್ಲೀಷ ಪ್ರಾಧ್ಯಾಪಕರಾದ ಎಂ.ವಿ.ಎಸ್.ಸುಬ್ಬಾರಾವ ಅವರಿಗೆ ಈ ವಿಷಯವನ್ನು ತಿಳಿಸಿದರು.

ಮತ್ತೊರ್ವರಾದ ಶಂಕರದೇವ ಎಂಬ ಇವರು ವಾಸ್ತವಿಕತೆಗೆ ಹೆಚ್ಚು ಮನ್ನಣೆ ಕೊಡುವ ಇವರು ವೈಜ್ಞಾನಿಕ ಮತ್ತು ಗೋಪ್ಯಮಯವಾಗಿ ಪರೀಕ್ಷಿಸಿದವರಲ್ಲಿ ಪ್ರಮುಖರು. ಇವರು ಹೈದ್ರಾಬಾದು ರಾಜ್ಯದ ಮಂತ್ರಿಯಾಗಿದ್ದರು. ಮಾಣಿಕೇಶ್ವರಿಯ ನಿರಾಹಾರದ ಬಗ್ಗೆ ಸಾಕಷ್ಟು ತಿಳುವಳಿಕೆಯನ್ನು ಹೊಂದಿದ್ದ ಅವರು ಸತ್ಯ ಸಂಗತಿಯನ್ನು ತಿಳಿಯಲು ಯಾನಾಗುಂದಿಗೆ ಪ್ರಯಾಣ ಬೆಳೆಸಿ, ಪರೀಕ್ಷೆಗಾಗಿ ಗೂಢಚಾರರನ್ನು ನಿಯೋಜಿಸಿದರು. ಅನ್ನ-ಪಾನಾದಿಗಳಿಲ್ಲದೆ ಜೀವಿಸುವುದು ವಿಶ್ವಾಸಕ್ಕೆ ಬಹುದೂರವಾದುದೆಂದು ಬಗೆದರು. ಅನೇಕ ಗೂಢಚಾರರು ತಮ್ಮ ವರದಿಯಲ್ಲಿ "ಅನ್ನ-ನೀರು, ಮಲ-ಮೂತ್ರಗಳ ಬಗ್ಗೆ ಕಿಂಚಿತ್ತಾದರೂ ಸುಳಿವು ಸಿಕ್ಕಲಿಲ್ಲವೆಂದು ನಿರಾಹಾರವು ವಾಸ್ತವಿಕ ಸಂಗತಿಯೆಂದು ಸಚಿವರಿಗೆ ತಿಳಿಸಿದರು. ಶ್ರೀ ಶಂಕರದೇವ ಅವರಿಗೆ ಆಶ್ಚರ್ಯವೆನಿಸಿತು. ಸಂತುಷ್ಟರಾದ ಅವರು ಅಮ್ಮನ ನಿರಾಹಾರವನ್ನು ಹಿಂದಿ ಮತ್ತು ಇಂಗ್ಲೀಷ ಭಾಷೆಯ ಪುಸ್ತಕಗಳಲ್ಲಿ ಪ್ರಚಾರ ಪಡಿಸಿದರಲ್ಲದೆ, ದೈನಂದಿನ ಹಾಗೂ ವಾರ ಪತ್ರಿಕೆಗಳಲ್ಲಿ ಸ್ವತಹ ಲೇಖನಗಳನ್ನು ಬರೆದರು. ದೇಶಗಳವರೆಗೆ ಹಬ್ಬಿತು. ಇದರಿಂದ ಮಾಣಿಕೇಶ್ವರಿಯವರ ಕೀರ್ತಿಯು ದೂರದೂರದ

ಯೋಗ ಶಕ್ತಿಯಿಂದ ಆತ್ಮಜ್ಞಾನವನ್ನು ಪಡೆದ ಎಂತಹ ಘೋರ ತಪವನ್ನಾದರೂ ಆಚರಿಸುವ ಶಕ್ತಿಯನ್ನು ಪಡೆದಿದ್ದಾಳೆ ಎಂಬುದನ್ನು ಅರಿತುಕೊಂಡ ಶಾಂತವೀರ ಸ್ವಾಮಿಗಳು 'ಧರೆಗವತರಿಸಿದ ದಿವ್ಯಶಕ್ತಿ ನೀನು ವಿರಾಗಿಣಿ,

"ಯೋಗ ವಿಘ್ನಗಳನ್ನು ನಿರಾಯಾಸವಾಗಿ ಜಯಿಸಿದ ನೀನು ಕಾವಿಯನ್ನು ಧರಿಸು ಕೊರಳಲ್ಲಿ ರುದ್ರಾಕ್ಷಿ ಮಾಲೆಯಿಂದ ವಿಭೂಷಿತಳಾಗು ಪಾದುಕೆಗಳನ್ನು ಮೆಟ್ಟು ತ್ರಿಶೂಲವನ್ನು ಧರಿಸು ಮಹೇಶ್ವರಿಯಾಗು, ಎಂದು ಹರಸಿ ಕಾವಿಯ ಉಡುಪು ರುದ್ರಾಕ್ಷಿ ಮಾಲೆಯನ್ನು ಪಾದುಕೆ ತ್ರಿಶೂಲಗಳನ್ನು ಬಳುವಳಿಯಾಗಿ ನೀಡಿ ಬಿಳ್ಕೊಟ್ಟರು. ಕಾಷಾಯಾಂಬರವನ್ನು ಧರಿಸಿದ ಮಾಣಿಕೇಶ್ವರಿ 'ಮಹಾಯೋಗಿನಿ' ಯಾದಳು. ಲೋಕ ಮಾತೆಯಾಗಿ ಅಂದಿನಿಂದ ಭಕ್ತಜನರೆಲ್ಲ 'ಅಮ್ಮ' ಎಂದೇ ಕರೆಯಲಾರಂಭಿಸಿದರು". ". ಇಂಥ ಮಹಾಯೋಗಿನಿಗೆ ಜನ್ಮ ನೀಡಿದ ಪುಣ್ಯ ಭೂಮಿ ಭಾರತ ಧನ್ಯ ನೊಂದವರ ಬಾಳಿನ ನಂದಾದೀಪವಾಗಿ

ಜಗವನ್ನು ಬೆಳಗುತ್ತಿರುವ ಶ್ರೀ ಮಹಾಯೋಗಿನಿ ಮಾತೆ ಮಾಣಿಕೇಶ್ವರಿಯವರು ಅಷ್ಟಸಿದ್ಧಿಗಳನ್ನು ಕಟ್ಟಿ ಆಳುತ್ತಿರುವ ದಿಟ್ಟ ಯೋಗಿನಿ ಎನಿಸಿಕೊಂಡವರು. ಮಾಣಿಕಗಿರಿಗೆ ಬರುವ ಭಕ್ತರ ಪಾಲಿನ ಕಾಮಧೇನು, ಕಲ್ಪತರು ಆಗಿ ಭಕ್ತರ ಮನೋಭಿಷ್ಟಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ನಾಡಿನ ತುಂಬ ಭಕ್ತ ಸಂಕುಲವನ್ನು ಹುಟ್ಟಿಹಾಕಿದ ಮಹಾನ್ ವಿರಾಗಿಣಿ.

'ತನ್ನತನವರಿತು ಲೋಕವೇ ತಾನಾದ ಬಳಿಕ ಏಕಾಂತದ ಹಂಗೇತಕೆ" ಎಂದು ಲೋಕಾಂತದಲ್ಲೇ ಏಕಾಂತ ಕಂಡ ಮಾಣಿಕಮ್ಮನವರ ಬದುಕೆ ಒಂದು ಯೋಗವೆನಿಸಿದೆ. ಒಂದೊತು ಉಂಡವನು ಯೋಗಿ, ಎರಡು ಹೊತ್ತು ಉಂಡವನು ಭೋಗಿ, ಮೂರು ಹೊತ್ತು ಉಂಡವ ರೋಗಿ ನಾಲ್ಕು ಹೊತ್ತು ಉಂಡವನನ್ನು ಹೊತಕೊಂಡು ಹೋಗಿ ಅಂತ ಹೇಳುವುದುಂಟು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಏನನ್ನು ಸೇವಿಸದೇ ಜೀವಿಸಿದ್ದಾರೆ ಎಂಬುದಕ್ಕೆ ಯಾನಾಗುಂದಿಯ ಮಾಣಿಕೇಶ್ವರಿಯವರು ಜೀವಂತ ಕಾರಣಿಭೂತರಾಗಿದ್ದಾರೆ. ಮಲ್ಲಾಬಾದ ಜನರಿಂದ ಹುಚ್ಚಿ, ದೆವ್ವಹಿಡಿದಿದೆ, ತಲೆಕೆಟ್ಟವಳು, ಎಂದು ಕರೆಯಿಸಿಕೊಳ್ಳುತ್ತಿದ್ದ 'ಮಾಣಿಕೇಶ್ವರಿ' ನಂತರದ ದಿನಗಳಲ್ಲಿ 'ಮಹಾಯೋಗಿನಿ', 'ಮಾತೆ' ಆಗಿ ಬೆಳೆದ ಪರಿ ಅನನ್ಯ.

**ಆಧಾರ ಗ್ರಂಥಗಳು**


1. ಮಾತೆ ಮಾಣಿಕೇಶ್ವರಿ (ಜೀವನ ಚರಿತ್ರೆ) ಡಾ|| ಮಲ್ಲಿಕಾರ್ಜುನ್ ಶಿವಪ್ಪ ಲತ್ತೆ
2. ಮಹಾಯೋ ಗಿನಿ ಮಾತೆ ಮಾಣಿಕೇಶ್ವರಿ (ಜೀವನ ಚರಿತ್ರೆ) : ಎಂ.ಎಂ ಚಂಡರಕಿ (ಜೀವನ ಚರಿತ್ರೆ).
3. ಯನಾಗುಂದಿ ಮಾಣಿಕಮ್ಮ : ಶೋಭಾದೇವಿ ಚೆಕ್ಕಿ .
4. ಶ್ರೀ ಶ್ರೀ ಶ್ರೀ ಮಾಣಿಕೇಶ್ವರಿ ಮಾತಾ ಜೀವತ ಚರಿತ್ರೆ : ಪಂಡಿತ ದಾಮರರಾಮುಲು
5. ಶೀವಯೋಗ ಪ್ರಾದೀಪಕ್ : ಡಾ|| ವೀರಣ್ಣ ರಾಜೂರು
6. ಹೀರೆಮಠ ಸುಗೂರು ಶಿವಶರಣೆ ಶೀವಲಿಂಗಮ್ಮ : ವೀರೇಶ ಹಳ್ಳೂರ